# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**

**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/05/2020-21 ದಿನಾಂಕ: 05.12.2020

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-05.12.2020 ರಂದು ಹೊರಮಾವು ಉಪ-ವಿಭಾಗದ ವಾರ್ಡ್-26 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

<u>ಉಪಸ್ಥಿತರು:</u>

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವರಾಜ್ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 | |
| 2 | ವಿಜಯ ಕುಮಾರ್ | ಕಾರ್ಯದರ್ಶಿ ವಾರ್ಡ್ ನಂ-26 | 9844587466 |
| 3 | ಶ್ರೀಮತಿ.ಜ್ಯೋತಿಲಕ್ಷ್ಮಿ | ಸಹಾಯಕ ಕಂದಾಯ ಅಧಿಕಾರಿ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕ್ಕರು | 9108201798 |
| 4 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 5 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 | 9739838297 |
| 6 | ಶ್ರೀ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.26, | 9916609413 |
| 7 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 8 | ಶ್ರೀ. ಜಯರಾಮ್, | ಕಂದಾಯ ಅಧಿಕಾರಿ | 9663954692 |
| 9 | ಶ್ರೀ.ನಾರಯಣಸ್ವಾಮಿ | ಕಂದಾಯ ಅಧಿಕಾರಿ | 9880817752 |
| 10 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | | ಸಾರ್ವಜನಿಕರು | |
| 11 | ಶ್ರೀ.ನಂಜಪ್ಪ | ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 12 | ಶ್ರೀ ಎಲಿಜಬೆತ್ | ಪುಣ್ಯಭೂಮಿ ವೆಲ್‌ಫೇರ್ ಅಸೋಸಿಯೇಷನ್ | - |
| 13 | ಶ್ರೀ.ಪನ್ನೀರ್ ಸೆಲ್ವಂ | ಎನ್.ಆರ್.ಐ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ | - |
| 14 | ಶ್ರೀಮತಿ.ಗೀತಾ | ಪೂಜಾಗಾರ್ಡನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 15 | ಶ್ರೀಮತಿ.ಉಷಾ, | ಮಂಜುನಾಥ ನಗರ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |

- ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

- <u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

<u>ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ 3ನೇ ಎ ಅಡ್ಡರಸ್ತೆಯಲ್ಲಿ ಚರಂಡಿ ಬ್ಲಾಕ್ ಆಗಿದ್ದು, ನೀರು ಸರಾಗವಾಗಿ ಹರಿಯದೇ ಇದ್ದು ಇದನ್ನು ತುರ್ತಾಗಿ ಪರಿಶೀಲಿಸಿ, ದುರಸ್ಥಿ ಪಡಿಸಲು ಕೋರಿರುತ್ತಾರೆ.

<u>ಕ್ರಮ:</u>- ವಾರ್ಡ್ ಸಂಖ್ಯೆ 26 ರ ಸಹಾಯಕ ಅಭಿಯಂತರರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

<u>ಶ್ರೀ ಎಲಿಜಬೆತ್ ಪುಣ್ಯಭೂಮಿ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಈಗಾಗಲೇ ಕಾವೇರಿ ಮತ್ತು ಒಳಚರಂಡಿ ಸಂಪರ್ಕ ಪೂರ್ಣಗೊಂಡಿದ್ದು, ಈ ಬಡಾವಣೆಯ ರಸ್ತೆಗಳಲ್ಲಿ ಓಡಾಡಲು ತುಂಬಾ ತೊಂದರೆಯಾಗಿದ್ದು, ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲು ಕೋರಿರುತ್ತಾರೆ.
<u>ಕ್ರಮ:</u>- ವಾರ್ಡ್ ಸಂಖ್ಯೆ 26 ರ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿ 2020-21 ನೇ ಸಾಲಿನ ಆಯವ್ಯಯದಲ್ಲಿ ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಅನುದಾನವನ್ನು ಕಾಯ್ದಿರಿಸಿದ್ದು, ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

<u>ಶ್ರೀ.ಪನ್ನೀರ್ ಸೆಲ್ವಂ ಎನ್.ಆರ್.ಐ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಎನ್.ಆರ್.ಐ ಬಡಾವಣೆಯ ಮುಖ್ಯ ರಸ್ತೆ ಕೂಡಲೇ ಡಾಂಬರೀಕರಣ ಮಾಡಲು ಮತ್ತು ರಸ್ತೆಯು ತುಂಬಾ ಹಾಳಾಗಿದ್ದು, ವಾಹನಗಳ ಸಂಚಾರ ಹೆಚ್ಚಾಗಿದ್ದು, ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ರಸ್ತೆ ದುರಸ್ಥಿ ಮಾಡಿ, ರಸ್ತೆ ಅಭಿವೃದ್ಧಿ ಪಡಿಸಲು ಕೋರಿರುತ್ತಾರೆ.

<u>ಕ್ರಮ:</u>- ವಾರ್ಡ್ ಸಂಖ್ಯೆ 26 ರ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿ ಕೂಡಲೇ ರಸ್ತೆಯನ್ನು ದಿನಾಂಕ:- 15.12.2020 ರ ಒಳಗೆ ಡಾಂಬರೀಕರಣ ಮಾಡಲು ಕ್ರಮ ವಹಿಸಲಾಗುವುದು ಹಾಗೂ ರಸ್ತೆಯಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಕೊಳವೆಸಾಲು ಛೇಂಬರ್ ಅಳವಡಿಸುವ ಕೆಲಸವು ದಿನಾಂಕ:15.12.2020 ಕ್ಕೆ ಪೂರ್ಣಗೊಳ್ಳುವುದಾಗಿ ಸಭೆಗೆ ಜಲಮಂಡಳಿ ಸಹಾಯಕ ಅಭಿಯಂತರರಾದ ಶ್ರೀ.ಚಂದನ್ ರವರು ದೂರವಾಣಿ ಮುಖಾಂತರ ತಿಳಿಸಿದ್ದು, ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ಡಾಂಬರಿಕರಣ ಮಾಡಲು ರೂ.2.50 ಕೋಟಿಗಳ ವೆಚ್ಚದಲ್ಲಿ ಜಾಬ್‌ಸಂಖ್ಯೆ 26-21-000029, ದಿನಾಂಕ:25.11.2020 ರಂದು ಅನುದಾನವು ಬಿಡುಗಡೆಗೊಂಡಿದ್ದು, ತುರ್ತಾಗಿ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

**ಶ್ರೀಮತಿ.ಗೀತಾ ಪೂಜಾಗಾರ್ಡನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್**:- ಸದರಿ ಬಡಾವಣೆಯಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಸರ್ವೀಸ್ ಛೇಂಬರ್‌ನ್ನು ಅಳವಡಿಸಲು ಮತ್ತು ಪಾಲಿಕೆಯ ಸುಮಾರು 1.00ಕಿ.ಮೀ ಪೈಪ್‌ಲೈನ್ ಹಾಳಾಗಿದ್ದು, ಹಾಗೂ ಪೈಪ್‌ಲೈನ್‌ನ್ನು ಬದಲಾಯಿಸಿ ಕೊಳವೆಸಾಲನ್ನು ಅಳವಡಿಸಿದ ನಂತರ ಪೂಜಾ ಗಾರ್ಡ್‌ನ್ ಮುಖ್ಯ ರಸ್ತೆಯನ್ನು ಡಾಂಬರೀಕರಣ ಮಾಡಲು ಕೋರಿರುತ್ತಾರೆ.

ಕ್ರಮ:- ಬಿ.ಬಿ.ಎಂ.ಪಿ ವಾರ್ಡ್ ಅಭಿಯಂತರರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀಮತಿ.ಉಷಾ, ಮಂಜುನಾಥ ನಗರ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-** ಪ್ರತಿದಿನ ಕಸವಿಲೇವಾರಿ ಸಮರ್ಪಕವಾಗಿ ನಿರ್ವಹಿಸಲು ಕೋರಿರುತ್ತಾರೆ.
ಕ್ರಮ:- ಆರೋಗ್ಯ ನಿರೀಕ್ಷಕರುಗಳು ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ
ಸಹಾಯಕ ಅಭಿಯಂತರರು ರಾಮಮೂರ್ತಿನಗರ ವಾರ್ಡ್
ಸಂಖ್ಯೆ-26 ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-26
ಹಾಗೂ ಉಪ-ಆಯುಕ್ತರು
(ಮಹದೇವಪುರ ವಲಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ

8. I have also enclosed photographs of the activity done by the BBMP on the scuit Schedule property for the kind perusal of the Hon'ble Court

9. All the statements made above in paragraphs 1 to 9 including this paragraph are true and correct to the best of my knowledge information and belief.

Bangalore

Date:

Deponent

Identified by me,

Advocate







